ಕೊಟ್ಟು ಮಾತಾಡಿದ್ದಾರೆ. ಪುನಃ ಇವತ್ತು ವಿಷಯ ಬಂದಿದೆ, ಸ್ವಲ್ಪ ತೀವ್ರವಾಗಿ ಎಂದು ಕಾಣುತ್ತಿದೆ. ತೋಟಗಾರಿಕೆ ಸಚಿವರನ್ನು ಕರೆಯಿಸಿ ನಿಮಗೆ ಉತ್ತರವನ್ನು ನಾಳೆ ಒಳಗೆ ಕೊಡಿಸುತ್ತೇವೆ.

(ಗೊಂದಲ)

ಒಂದು ಮಾತು, ಪ್ರತಿ ವಾಕ್ಯದಲ್ಲೂ ಪ್ರತಿ ವಿಷಯದಲ್ಲೂ, ಸರ್ಕಾರ ಇಲ್ಲ, ಸರ್ಕಾರ ಇಲ್ಲ ಎಂದು ಹೇಳುತ್ತಿದ್ದೀರಿ. ಸರ್ಕಾರ ಇಲ್ಲದ ಮೇಲೆ ನೀವ್ಯಾಕೆ ನಮ್ಮನ್ನು ಕೇಳುತ್ತೀರಿ?

ಅಧ್ಯಕ್ಷರು : ಆಯಿತು, ಈಗ ಮಾನ್ಯ ಕಂದಾಯ ಸಚಿವರು ತಮ್ಮ ಹೇಳಿಕೆಯನ್ನು ಮಾಡಿ.

ಮಂತ್ರಿಗಳ ಹೇಳಿಕೆ

ಮೈಸೂರು ಜಿಲ್ಲೆ ಕಬಿನಿ ಜಲಾಶಯ ಯೋಜನೆಯ ಭೂಸ್ವಾಧೀನಕ್ಕೆ ಪರಿಹಾರ ಹಣದ ವಿತರಣೆ ಬಾಕಿ.

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) : ಭೂಸ್ವಾಧೀನ ಕಾಯಿದೆ 1894ರ ಅಡಿಯಲ್ಲಿ ಭಾರಿ ನೀರಾವರಿ ಇಲಾಖೆಯ ಪರವಾಗಿ ಮೈಸೂರು ಜಿಲ್ಲೆಯಲ್ಲಿ ಕಬಿನಿ ಜಲಾಶಯ ಯೋಜನೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸುಮಾರು 21,080 ಎಕರೆ ಜಮೀನುಗಳನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಈ ಒಟ್ಟು ಭೂಮಿಯ ಮಾಲೀಕರುಗಳಿಗೆ ರೂ. 26,92,796-00 ಗಳನ್ನು ಕರಮ ಐತೀರ್ಪನ್ನು ಸರ್ಕಾರ ಮಂಜೂರು ಮಾಡಿದೆ. ಈ ಒಟ್ಟು ಮೊತ್ತದ ಪೈಕಿ ರೂ. 23,12,66,916-00 ಗಳನ್ನು ಭೂಮಾಲೀಕರುಗಳಿಗೆ ವಿತರಣೆ ಮಾಡಲಾಗಿದೆ. ವಿತರಣೆ ಕಾರ್ಯದ ವಿಚಾರದಲ್ಲಿ ನೀರಾವರಿ ಇಲಾಖೆ ಹಾಗೂ ಆರ್ಥಿಕ ಇಲಾಖೆ ಹಣ ಬಿಡುಗಡೆ ಮಾಡುವ ಸಲುವಾಗಿ ಒತ್ತಾಯ ಕಾರ್ಯ ಮುಂದುವರಿದಿದೆ.

ಈ ಮಧ್ಯೆ ಕೆಲವು ಭೂಮಾಲೀಕರುಗಳು ಭೂಸ್ವಾಧೀನ ಕಾಯಿದೆ 1894ರ ಕಲಂ 18ರಡಿಯಲ್ಲಿ ಹೆಚ್ಚುವರಿ ಪರಿಹಾರ ಹಣಕ್ಕೆ ಸಂಬಂಧಪಟ್ಟ ಸಿವಿಲ್ ನ್ಯಾಯಾಲಯಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದು, ಸಿವಿಲ್ ನ್ಯಾಯಾಲಯವು ಅರ್ಜಿಗಳನ್ನು ವಿಲೆ ಮಾಡಿ 45 ಲಕ್ಷ ರೂಪಾಯಿಗಳನ್ನು ಭೂಸ್ವಾಧೀನದ ಹೆಚ್ಚುವರಿ ಪರಿಹಾರ ಎಂದು ಆದೇಶ ಹೊರಡಿಸಿದೆ. ಈ 45 ಲಕ್ಷ ಹೆಚ್ಚುವರಿ ಪರಿಹಾರ ವಿತರಣೆಯ ಸಲುವಾಗಿ ಜಿಲ್ಲಾಧಿಕಾರಿಗಳು ಭಾರಿ ನೀರಾವರಿ ಇಲಾಖೆ ಹಾಗೂ ಆರ್ಥಿಕ ಇಲಾಖೆ ಹಾಗೂ ಆರ್ಥಿಕ ಇಲಾಖೆಯೊಡನೆ ಪ್ರಸ್ತಾವನೆ ಮಂಡಿಸಿದ್ದು, ಹಣ ಬಿಡುಗಡೆಗೆ ಮೇಲಿಂದ ಮೇಲೆ ಒತ್ತಾಯ ಮಾಡುತ್ತಿದ್ದಾರೆ.

ಒಟ್ಟಾರೆ ಭೂಮಾಲೀಕರುಗಳಿಗೆ ಸರ್ಕಾರ ಹಣ ವಿತರಣೆ ಮಾಡುವುದು ಸುಮಾರು 3 ಕೋಟಿ 85 ಲಕ್ಷ ರೂಪಾಯಿ ಬಾಕಿ ಇದ್ದು, ಹಣ ವಿತರಣೆ ಮಾಡಬೇಕಾಗಿದೆ. ಹಣ ಬಿಡುಗಡೆಯಾದ ತಕ್ಷಣ ತ್ವರಿತವಾಗಿ ವಿತರಣೆ ಮಾಡಲಾಗುವುದು.

+ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಭೂಸ್ವಾಧೀನ ಇಲಾಖೆಯ ಅಧಿಕಾರಿಯ ಕಾರ್ಯಾಲಯವನ್ನು ಒಂದು ಸಾರಿ ಅಲ್ಲ ಎರಡು ಸಾರಿ ಜಪ್ತಿ ಮಾಡಿಲಾಗಿದೆ. ಸರ್ಕಾರ ಈಗ 3.85 ಕೋಟಿ ರೂ.ಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಯಾವಾಗ ಬಿಡುಗಡೆ ಮಾಡುತ್ತಾರೆ ಏನು ಎಂದು ಒಂದು ಸ್ಪಷ್ಟ ನಿರ್ದೇಶನವನ್ನು ಕೊಡಬೇಕು. ಇದು ಇವತ್ತಿನದಲ್ಲ, ಎರಡು ಮೂರು ನಾಲ್ಕು ವರ್ಷದಿಂದ ಒಂದೇ ಸಮನೆ ಒತ್ತಾಯದ ಮೇಲೆ ಒತ್ತಾಯ ತರುತ್ತಾ ಇದ್ದಾರೆ. ನ್ಯಾಯಾಲಯಕ್ಕೆ ರೈತರು ಹೋಗಿದ್ದಾರೆ. ಆ ರೈತರ ಪರವಾಗಿ ನ್ಯಾಯಾಲಯ

ಕಾರ್ಯಾಲಯವನ್ನು ಜಪ್ತಿ ಮಾಡಿದ್ದಾರೆ. ಇರತಕ್ಕಂತಹ ಎಲ್ಲಾ ಕುರ್ಚಿಬೆಂಚುಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಈ ಪರಿಸ್ಥಿತಿ ಇರುವಾಗ ರೈತರ ಬವಣೆಯನ್ನು ತಾವು ಪರಿಶೀಲಿಸಿ ಎಷ್ಟು ದಿವಸದಲ್ಲಿ ಸರಿ ಮಾಡುತ್ತೀರಿ? ಚಾಮರಾಜನಗರ ನಂಜನಗೂಡು ಗುಂಡ್ಲುಪೇಟೆ, ಕೊಳ್ಳೇಗಾಲ, ಹೆಗ್ಗಡದೇವನಕೋಟೆ ಪ್ರದೇಶದ ಅನೇಕ ಭೂಮಾಲೀಕರಿಗೆ ಬಹಳ ತೊಂದರೆಯಾಗಿದೆ. ಇದನ್ನು ಕೂಡಲೇ ನೀವು ಒಂದು ನಿರ್ದಿಷ್ಟ ದಿನದಲ್ಲಿ ಕೊಡುತ್ತೇವೆ ಎಂದು ಹೇಳಿ. ಇಲ್ಲದೆ ಇದ್ದರೆ, ಮತ್ತೆ ಜಪ್ತಿ ಮಾಡುತ್ತಾರೆ ಬಹಳ ತೊಂದರೆಯಾಗುತ್ತದೆ, ಸರ್ಕಾರಕ್ಕೆ ಬಹಳ ಅಗೌರವಾಗುತ್ತದೆ. ಸಂಸದೀಯ ಸಚಿವರು ಮಾತೆತ್ತಿದರೆ ನಮ್ಮ ಸರ್ಕಾರ ಬಹಳ ಭದ್ರವಾಗಿದೆ, ನಮ್ಮ ಹಣಕಾಸಿನ ವ್ಯವಸ್ಥೆ ಚೆನ್ನಾಗಿದೆ ನಾವು ಸುಭದ್ರವಾಗಿದ್ದೇವೆ ಎಂದು ಹೇಳುತ್ತಾರೆ. ಇಲ್ಲಿ ಸರ್ಕಾರದ ಕಾರ್ಯಾಲಯವನ್ನು ಜಪ್ತಿ ಮಾಡುವ ಮಟ್ಟಕ್ಕೆ ಬಂದರೆ ನಿಮ್ಮ ಸರ್ಕಾರ ದಿವಾಳಿಯಾಗಿದೆ ಎನ್ನುವುದರಲ್ಲಿ ಬೇರೆ ಮಾತಿಲ್ಲ. ಆದ್ದರಿಂದ ಬಂಡವಾಳ ಇಲ್ಲದ ಬಡಾಯಿ ನೀವು ಹೇಳುವುದಕ್ಕೆ ಹೋಗಬೇಡಿ. ನೇರವಾಗಿ ಹೇಳಿ, ಯಾರದೋ ಖಾಸಗಿಯವರ ಮನೆ ಜಪ್ತಿ ಆಗುತ್ತಿಲ್ಲ. ಸರ್ಕಾರದ ಕಾರ್ಯಾಲಯವನ್ನು ಜಪ್ತಿ ಮಾಡತಕ್ಕಂತಹ ಪರಿಸ್ಥಿತಿ ತೀವ್ರ ಅಗೌರವ. ಆದ್ದರಿಂದ ಸಚಿವರು ಕೂಡಲೇ ಎಷ್ಟು ದಿವಸದೊಳಗಾಗಿ ತೀರಿಸುತ್ತೇವೆಂದು ಸ್ಪಷ್ಟ ಭರವಸೆಯನ್ನು ಕೊಡಬೇಕು.

ಶ್ರೀ ಧರ್ಮಸಿಂಗ್ : ಭೂ ಸ್ವಾಧೀನದ ಬಗ್ಗೆ ಅಲ್ಲಿರತಕ್ಕಂತಹ ರೈತರಿಗೆ ಏನು ಅನಾನುಕೂಲತೆಯಾಗಿದೆ ಅದನ್ನು ಸ್ವಲ್ಪ ಮಟ್ಟಿಗಾದರೂ ಪರಿಹರಿಸಲು ನಾವು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಹೈಕೋರ್ಟ್, ಸಿವಿಲ್ ಕೋರ್ಟ್ ಕೊಟ್ಟ ತೀರ್ಪಿನ ಪ್ರಕಾರ ಅಲ್ಲಿಂದ ತೀರ್ಪು ಬಂದ ಮೇಲೆ ಸುಮಾರ 7-8 ಪ್ರಕರಣಗಳಲ್ಲಿ 10 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. 10 ಲಕ್ಷ ರೂಪಾಯಿಗಾಗಿ ಅವರು ಹೋಗಿ ಜಪ್ತಿ ಮಾಡತಕ್ಕಂತಹ ರೀತಿಯಲ್ಲಿ ಹೋಗಿದ್ದಾರೆ. ಆಗ ಜಿಲ್ಲಾಧಿಕಾರಿಗಳು ಮಧ್ಯಸ್ಥಿಕೆ ವಹಿಸಿ ಸರಕಾರದಿಂದ ಹಣವನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದಾರೆ. ಒಟ್ಟಾರೆ 3-4 ತಾಲ್ಲೂಕಿನಲ್ಲಿರತಕ್ಕಂತಹ 21,080 ಎಕರೆ ಜಮೀನು ಏನು ಇದೆ ಅದಕ್ಕೆ ಒಟ್ಟಾರೆ 26.52 ಲಕ್ಷ ಕೊಡಬೇಕಾಗಿದೆ. ಇದರಲ್ಲಿ 23.12 ಕೊಟ್ಟಿದ್ದೇವೆ. ಇನ್ನು 3 ಕೋಟಿ 85 ಲಕ್ಷ ರೂಪಾಯಿ ಕೊಡಬೇಕಾಗಿದೆ. ನಿನ್ನೆ ಎಫ್.ಸಿ. ಅವರ ಪತ್ತಿರ ಮತ್ತು ಇರಿಗೇಷನ್ ಕಾರ್ಯದರ್ಶಿ ವೆಂಕಟೇಶ ಪ್ರಸಾದ್ ಅವರ ಜೊತೆಯಲ್ಲಿ ಮಾತನಾಡುತ್ತಿದ್ದೇನೆ. ಅದನ್ನೂ ಕೂಡ ತ್ವರಿತಗತಿಯಲ್ಲಿ ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತೇವೆಂದು ತಿಳಿಸಿದ್ದಾರೆ. ಈ 26 ಕೋಟಿಯಲ್ಲಿ 23 ಕೋಟಿಯನ್ನು ಈಗಾಗಲೇ ಸರಕಾರ ನೀಡಿದೆ. ಇನ್ನು 3 ಕೋಟಿ 85 ಲಕ್ಷ ರೂಪಾಯಿಗಳನ್ನು ಕೊಡುವ ವ್ಯವಸ್ಥೆ ಮಾಡಿದ್ದೇವೆ. ಜಪ್ತಿಯಾಗಿರುವುದು ಕೇವಲ 7-8ಪ್ರಕರಣಗಳಲ್ಲಿ 10 ಲಕ್ಷ ರೂಪಾಯಿ ಇತ್ತು; ಅದನ್ನು ಕೂಡ ಕೊಡುವ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಬಗ್ಗೆ ನಂಬಿಕೆ ಇದೆ. ತ್ವರಿತ ಅಂದರೆ ಯಾವಾಗ? ಕಾರ್ಯಾಲಯಕ್ಕೆ ನುಗ್ಗಿ ಲೂಟಿ ಮಾಡತಕ್ಕಂಥಾದ್ದು ಜಪ್ತಿ ಮಾಡತಕ್ಕಂಥಾದ್ದಕ್ಕೆ ಹೋದರೆ ಅದೂ ಸರಕಾರದ ಕಾರ್ಯಾಲಯಕ್ಕೆ ಈ ರೀತಿಯಾದರೆ ಬೇರೆ ಕಡೆ ಹೇಗಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕು. ತ್ವರಿತ ಅನ್ನುವ ಪದ ಇದೆಯಲ್ಲಾ ಅದಕ್ಕೆ ಇಂತಿಷ್ಟು ದಿನಗಳು ಎಂದು ಇರುವುದಿಲ್ಲ, ನಿಮ್ಮ ಬಗ್ಗೆ ನನಗೆ ವಿಶ್ವಾಸವಿದೆ. ಈ ವಾರದಲ್ಲಿ ಏನಾದರೂ ರೈತರ ಸಮಸ್ಯೆಯನ್ನು ಬಗೆಹರಿಸುತ್ತೀರಾ?

ಶ್ರೀ ಧರ್ಮಸಿಂಗ್ : ಲ್ಯಾಂಡ್ ಅಕ್ವೈರ್ ಮಾಡುವುದು ಕಂದಾಯ ಇಲಾಖೆಯವರು. ನಾನು ಇರಿಗೇಷನ್ ಕಾರ್ಯದರ್ಶಿಯವರ ಜೊತೆ ಮಾತನಾಡಿದ್ದೇನೆ. ಹಣಕಾಸು ಇಲಾಖೆಯ ಜೊತೆಯಲ್ಲಿ ಮಾತನಾಡಿದ್ದೇನೆ. ಸ್ವಲ್ಪ ಸಮಯದಲ್ಲಿ 26ರಲ್ಲಿ 23 ಕೋಟಿ ಹಣವನ್ನು ಕೊಟ್ಟಿದ್ದೇವೆ. ಇನ್ನು 3 ಕೋಟಿ 85 ಲಕ್ಷವನ್ನು ಪ್ರಯತ್ನ ಮಾಡಿ ತಕ್ಷಣ ಕೊಡುವಂತೆ ಹೇಳಿದ್ದೇನೆ.